ಸಾಕ್ಷಿಯನ್ನು ದಿಃ **28.10.2024** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ **2** ನೇ ಪ್ರತಿವಾದಿ ಪರ ಶ್ರೀ ಎಸ್ ಬಿ ಎಮ್ ವಕೀಲರಿಂದಃ-

ನಾನು ಈ ದಾವೆಯಲಿ 2 ನೇ ಪ್ರತಿವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ದಿನಾಂಕ 27.06.1980 ರ ಎರಡು ಗ್ರ್ಯಾಂಟ್ ಸರ್ಟಿಫಿಕೇಟ್ ನ ದೃಢೀಕೃತ ನಕಲುಗಳನ್ನು ನಿಡಿ 1 ಮತ್ತು 2 ಎಂದು, ಅಹವಾಲು ತಖ್ತೆಯ ದೃಢೀಕೃತ ನಕಲನ್ನು ನಿಡಿ 3 ಎಂದು, ಸಾಗುವಳಿ ಚೀಟಿಯ ಬಗ್ಗೆ ಕೊಡುವ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಡಿ 4 ಎಂದು, ನಮೂನೆ 52 ರ ನೋಟೀಸಿನ ದೃಢೀಕೃತ ನಕಲನ್ನು ನಿಡಿ 5 ಎಂದು, ನಕ್ಷೆಯ ದೃಢೀಕೃತ ನಕಲನ್ನು ನಿಡಿ 6 ಎಂದು, ನನ್ನ ತಂದೆಗೆ ಎಸ್ ಬಿ ಐ ಬ್ಯಾಂಕಿನವರು ನೀಡಿದ 3 ನೋಟೀಸ್ ಗಳನ್ನು ನಿಡಿ 7 ರಿಂದ 9 ಎಂದು, ದಿನಾಂಕ 15.12.1977 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಡಿ 10 ಎಂದು, ದಿನಾಂಕ 28.08.1981 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಡಿ 11 ಎಂದು, ದಿನಾಂಕ 06.01.2021 ರ ಮೂಲ ನೋಂದಾಯಿತ ಹಕ್ಕು ಖುಲಾಸೆ ಪತ್ರವನ್ನು ನಿಡಿ 12 ಎಂದು, ಒಂದು ಇಸಿ ಯನ್ನು ನಿಡಿ 13 ಎಂದು, ದಿನಾಂಕ 24.05.2019 ರ ದಾನ ಪತ್ರದ ದೃಢೀಕೃತ ನಕಲನ್ನು ನಿಡಿ 14 ಎಂದು, ದಿನಾಂಕ 09.05.2019 ರ ಎರಡು ದಾನ ಪತ್ರಗಳ ದೃಢೀಕೃತ ನಕಲುಗಳನ್ನು ನಿಡಿ 15 ಮತ್ತು 16 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ**

ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.